**ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ**

ಸಿ ಸಿ ನಂ. 148/2021

ಸಾಕ್ಷಿಗೆ ದಿನಾಂಕ 17-04-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1 P.W.: 1

| | | |
|---|---|---|
| ಹೆಸರು | : | ದಯಾನಂದ್ |
| ತಂದೆಯ ಹೆಸರು | : | ಎ ಪ್ರಕಾಶ್ ಗೌಡ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ರೈಲ್ವೆ ಗೇಟ್ ಮ್ಯಾನ್ |
| ವಾಸ ಸ್ಥಳ | : | ಹೆಚ್ ಬಿ ಹಳ್ಳಿ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ನಾನು ಸನ್ 2019 ರಿಂದ ಹೆಚ್ ಬಿ ಹಳ್ಳಿಯಲ್ಲಿರುವ ಎಲ್ ಸಿ-40 ಯಲ್ಲಿ ರೈಲ್ವೆ ಗೇಟ್ ಮ್ಯಾನ್ ಅಂತಾ ಕೆಲಸ ನಿರ್ವಹಿಸುತ್ತಿದ್ದೇನೆ.

ದಿಃ 10-02-2020 ರಂದು ನಾನು ಹೆಚ್ ಬಿ ಹಳ್ಳಿಯ ರಾಮ ರಹೀಂ ನಗರ ಚಿತ್ರಂಪಳ್ಳಿಯಲ್ಲಿ ಎಲ್ ಸಿ-40 ಯ ಗೇಟ್ ಮ್ಯಾನ್ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೆ. ರಾತ್ರಿ 10.30 ಗಂಟೆ ಸಮಯದಲ್ಲಿ ಹಾಸನ್ ಬಿ ಟಿ ಪಿ ಎನ್ ರೈಲು ಬರುತ್ತಿದ್ದು ನಾನು ಆ ಕಾರಣದಿಂದಾಗಿ ರೈಲ್ವೆ ಗೇಟನ್ನು ಹಾಕಿರುತ್ತೇನೆ. ಆಗ ದ್ವಿಚಕ್ರ ವಾಹನದಲ್ಲಿ 1ನೇ ಆರೋಪಿತನು ಬಂದಿರುತ್ತಾನೆ ಅವರ ಹಿಂದಿನಿಂದ ಒಂದು ಉಸುಕಿನ ಟ್ರಾಕ್ಟರ್ ಬಂದಿರುತ್ತದೆ. ಆಗ 1ನೇ ಆರೋಪಿತನು ರೈಲ್ವೆ ಗೇಟನ್ನು ತೆಗೆಯಲು ಹೇಳಿರುತ್ತಾನೆ. ಆಗ ನಾನು ಅಣ್ಣಾ ಟ್ರೈನ್ ಬರುತ್ತೆ ಸ್ವಲ್ಪ ತಡೆಯಿರಿ ಆಮೇಲೆ ಗೇಟ್ ತೆಗೆಯುತ್ತೇನಂತಾ ಹೇಳಿದೆ. ಆಗ ಶಾಂತಪ್ಪ ಇವನು ದ್ವಿಚಕ್ರ ವಾಹನದಿಂದ ಇಳಿದುಬಂದು ನನಗೆ ಸೂಳೆಮಗನೇ ಅಂತಾ ಬೈದು ನನಗೆ ಅರ್ಜೆಂಟ್ ಇದೆ ಟ್ರಾಕ್ಟರ್ ತೆಗೆದುಕೊಂಡು ಹೋಗಬೇಕು ಗೇಟ್ ತೆಗೆ ಅಂತಾ ಹೇಳಿರುತ್ತಾನೆ ಮತ್ತು ನನ್ನ ಕೈಯಲ್ಲಿದ್ದ ಹ್ಯಾಂಡಲನ್ನು ಕಸಿದುಕೊಳ್ಳಲು ಬಂದಿರುತ್ತಾನೆ. ಅದನ್ನು ನಾನು ತೆಗೆದುಕೊಂಡು ದೂರಕ್ಕೆ ಚಲ್ಲಿದೆ. 1ನೇ ಆರೋಪಿತನು ನನಗೆ ಕೈಯಿಂದ ಗುದ್ದಿರುತ್ತಾನೆ. ನಂತರ ಟ್ರೈನು ಹೋದಮೇಲೆ ನಾನು ನಿಯಮದಂತೆ ನಮ್ಮ ಸ್ಟೇಷನ್ ಮಾಸ್ಟರ್ ಇವರ ಪರವಾನಿಗೆ ಪಡೆದು ಗೇಟನ್ನು ತೆಗೆದೆ. ಸದರಿಯವನು ಗಾಡಿ ತೆಗೆದುಕೊಂಡು ಹೋಗುವಾಗ ಸೂಳೆಮಗನೇ ಇಲ್ಲೇಇರು ನಿನಗೆ ಮಾಡಿರುತ್ತೇನೆ ಅಂತಾ ಹೇಳಿ ಹೋಗಿರುತ್ತಾನೆ. ನಂತರ ನಾನು ಪುನಃ ಗೇಟನ್ನು ಹಾಕಿದೆ ಆಗ

ಚೌಡಪ್ಪ ಮತ್ತು ನಾಗರಾಜ್ ಆರೋಪಿ ನಂ.3 ಮತ್ತು 4 ರವರು ಬಂದರು, ಇನ್ನೊಂದು ಕಡೆಯಿಂದ 1 ಮತ್ತು 2 ನೇ ಆರೋಪಿತರು ಬಂದು ನನಗೆ ಅವಾಚ್ಯವಾಗಿ ಬೈದು, ನಮ್ಮ ಉಸುಕಿನ ಟ್ರಾಕ್ಟರಿಗೆ ಪೋಲೀಸರು ತೊಂದರೆ ಮಾಡುತ್ತಾರೆ ನಿನಗೆ ಗೇಟ್ ತೆಗೆಯಲು ಆಗಲ್ವಾ ಅಂತಾ ಹೇಳಿ 1 ನೇ ಆರೋಪಿ ನನ್ನ ಕೊರಳಪಟ್ಟಿ ಹಿಡಿದು ನೆಲಕ್ಕೆ ದೂಕಿದನು, 3 ನೇ ಆರೋಪಿತನು ಒಂದು ಸಣ್ಣ ಕಬ್ಬಿಣದ ರಾಡನ್ನು ತೆಗೆದುಕೊಂಡು ಕಾಲಿಗೆ ಹೊಡೆದನು, 2 ಮತ್ತು 4 ನೇ ಆರೋಪಿತರು ನನಗೆ ಕಾಲಿನಿಂದ ಒದ್ದರು. ಅಲ್ಲಿದ್ದ ವೀರೇಶ್, ಚನ್ನವೀರ್ ಮತ್ತು ಉಲುಗಪ್ಪ ಇವರು ಬಂದು ನನ್ನನ್ನು ಬಿಡಿಸಿದರು. ಆರೋಪಿತರು ಅವರಿಗೂ ಸಹಾ ಬೈದು ಹೊಡೆದರು. ನನ್ನ ಕೈಯಲ್ಲಿದ್ದ ಟಾರ್ಚನ್ನು ಕಸಿದುಕೊಂಡು ಹೊಡೆದು ಮತ್ತು ಗೇಟನ್ನು ಕಾಲಿನಿಂದ ಒದ್ದರು. ನಂತರ ನಾನು ಈ ವಿಚಾರವನ್ನು ನಮ್ಮ ಅಧಿಕಾರಿಗಳಿಗೆ ತಿಳಿಸಿದೆ ನಂತರ 12 ಗಂಟೆ ಸಮಯದಲ್ಲಿ ಪೋಲೀಸರು ಸ್ಥಳಕ್ಕೆ ಬಂದರು. ನಂತರ ನಾನು ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿ ಚಿಕಿತ್ಸೆಯನ್ನು ಪಡೆದು ನಂತರ ನಾನು ದೂರು ಕೊಡಲು ಹೊಸಪೇಟೆ ಜಿ ಆರ್ ಪಿ ಎಫ್ ಗೆ ಹೋದೆ ಅವರು ದೂರು ಸ್ವೀಕರಿಸಿಲ್ಲ ಬಳ್ಳಾರಿಗೆ ಬರಲು ಹೇಳಿದರು. ನಂತರ ನಾನು ದಿಃ 12-2-2020 ರಂದು ದೂರನ್ನು ಬಳ್ಳಾರಿ ರೈಲ್ವೆ ಪೋಲೀಸ್ ಠಾಣೆಯಲ್ಲಿ ನೀಡಿರುತ್ತೇನೆ.

ಸದರಿ ದೂರನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನಾನು ಯಾವುದೇ ಮರುಹೇಳಿಕೆಯನ್ನು ನೀಡಿಲ್ಲ. ದಿನಾಂಕಃ16-03-2020 ರಂದು ಪೋಲೀಸರು ಪಂಚನಾಮೆ ಮಾಡಲು ಬಂದರು.

(ಸಹಾಯಕ ಸರ್ಕಾರಿ ಅಭಿಯೋಜಕರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ